## ಖಾಸಗಿ ಬದುಕು ಸುದ್ದಿಯಾಗದಿರಲಿ

ತನಗೆ ಮೋಸ ಮಾಡಿ ಬೇರೆಯವಳನ್ನು ಮದುವೆಯಾದ ಪತಿ, ಆ ಬೇರೆಯವಳ ಮೇಲೆ ಪತ್ನಿ ಬಹಿರಂಗವಾಗಿ ಹಲ್ಲೆ ಮಾಡಿದ್ದನ್ನು ಟಿವಿ ನ್ಯೂಸ್ ವಾಹಿನಿಗಳು ತಾಸುಗಟ್ಟಲೇ ತೋರಿಸುವುದು ವೀಕ್ಷಕರಿಗೆ ಕಿರಿಕಿರಿಯಾಗುತ್ತದೆ. ಸಾಮಾನ್ಯವಾಗಿ ಒಂದೆರಡು ಚಾನೆಲ್‌ಗಳಿಗೆ ಸೀಮಿತವಾಗಿರುತ್ತಿದ್ದ ಇಂತಹ ದೃಶ್ಯಾವಳಿಗಳು ಆಗಬಾರದ್ದು ಆಗಿ ಹೋದಂತೆ, ಒಂದು ರಾಷ್ಟ್ರೀಯ ದುರಂತವೆನ್ನುವಂತೆ ಬಹುತೇಕ ಎಲ್ಲಾ ಚಾನೆಲ್‌ಗಳಲ್ಲಿ ಒಂದೇ ಸಮಯದಲ್ಲಿ ಪ್ರಸಾರವಾಗುತ್ತವೆ.

ದಾಂಪತ್ಯದಲ್ಲಿ ಸರಸ– ವಿರಸ ತೀರಾ ಸಾಮಾನ್ಯ. ಇವುಗಳು ತೀರಾ ಖಾಸಗಿ ಮತ್ತು ವೈಯಕ್ತಿಕ ವಿಷಯಗಳಾಗಿದ್ದು, ಟಿವಿ ನ್ಯೂಸ್ ಚಾನೆಲ್‌ಗಳಲ್ಲಿ ವಿಜೃಂಭಿಸುವಷ್ಟು ಸುದ್ದಿ ಮೌಲ್ಯಗಳಿರುವುದಿಲ್ಲ. ತಮ್ಮ ವೈಯಕ್ತಿಕ ಜೀವನದ ವೈಷಮ್ಯಗಳು ಮತ್ತು ಹೊಯ್ದಾಟಗಳನ್ನು ತಮ್ಮ ಅನುಮತಿ ಇಲ್ಲದೇ ಸಾರ್ವಜನಿಕ ಚರ್ಚೆಗೆ ವೇದಿಕೆ ಮಾಡಿರುವುದಕ್ಕಾಗಿ ಯಾರಾದರೂ ನ್ಯಾಯಾಲಯದ ಕಟ್ಟೆ ಏರಿದರೆ ಚಾನೆಲ್‌ಗಳು ತೊಂದರೆಯಲ್ಲಿ ಸಿಲುಕುವುದನ್ನು ಅಲ್ಲಗಳೆಯಲಾಗದು. ಸುದ್ದಿ ವಾಹಿನಿಗಳಲ್ಲಿ ಸುದ್ದಿ ಪ್ರಸಾರ ಮಾಡುವಾಗ ಖಾಸಗಿ ಜೀವನದ ಘಟನೆಗಳು ಲೀಡ್ ಸ್ಟೋರಿಯಾಗದಿರಲಿ ಮತ್ತು ಆದಷ್ಟು ಕಡಿಮೆ ಮತ್ತು ಸಂಕ್ಷಿಪ್ತವಾಗಿ ಪ್ರಸಾರವಾಗಲಿ. ಸ್ಥಾನಮಾನಗಳು ಏನೇ ಇರಲಿ ಪ್ರತಿಯೊಬ್ಬರಿಗೂ ಸಮಾಜದಲ್ಲಿ ತಮ್ಮದೇ ಆದ ಗೌರವ ಇರುತ್ತದೆ ಮತ್ತು ಅವರು ಅದನ್ನು ಕಾಪಾಡಿಕೊಳ್ಳಲು ಹೆಣಗಾಡುತ್ತಾರೆ.

—ಡಾ.ಅನಿಕೇತ್ ಶರ್ಮಾ, ಬೆಂಗಳೂರು

## ವಿಶಿಷ್ಟ 'ಚಿದಂಬರ ರಹಸ್ಯ'

ಚಂದನ ಕನ್ನಡ ವಾಹಿನಿಯಲ್ಲಿ ಮೇಲಿಂದ ಮೇಲೆ ವಿಶೇಷ ಕಾರ್ಯಕ್ರಮಗಳು ಪ್ರಸಾರವಾಗುತ್ತಿವೆ. ಹಲವು ಜನಪರ ಕಾರ್ಯಕ್ರಮಗಳಿಂದ ಜನಪ್ರಿಯವಾಗುತ್ತಿದೆ. 'ಥಟ್ ಅಂತಾ ಹೇಳಿ', 'ಸತ್ಯ ದರ್ಶನ', 'ಮಧುರಮಧುರವೀ ಮಂಜುಳಗಾನ'ದಂತಹ ವಿಶೇಷ ಕಾರ್ಯಕ್ರಮಗಳನ್ನು ನೀಡಿ ವೀಕ್ಷಕರನ್ನು ಸೆಳೆಯುತ್ತಿದೆ. 'ಕಥಾಸರಿತ' ಸಂಚಿಕೆಯಲ್ಲಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ 'ಚಿದಂಬರ ರಹಸ್ಯ' ಚಿತ್ರರೂಪ ಪ್ರಸಾರವಾಯಿತು.

ಈ ಕಿರು ಚಿತ್ರ 6 ಕಂತುಗಳಲ್ಲಿದ್ದು, ಪ್ರತಿ ಕಂತಿನಲ್ಲಿಯೂ ವೀಕ್ಷಕರ ಕಾತರತೆಯನ್ನು ಕಾಯ್ದುಕೊಂಡು ಮುಂದಿನ ಸಂಚಿಕೆಯನ್ನು ತಪ್ಪದೇ ನೋಡಲು ಪ್ರೇರೇಪಿಸಿತು. ಮಲೆನಾಡಿನ ಸುಂದರ ಹಸಿರು ವಾತಾವರಣ, ಗುಡ್ಡ ಬೆಟ್ಟಗಳ ವಿಸ್ಮಯ ಚಿತ್ರಗಳ ಸುಂದರ ನಿಸರ್ಗ ಕಾವ್ಯದ ರೂಪವನ್ನು ಹೊತ್ತು ತಂದಿತು. ಹಲವು ವರುಷಗಳ ಹಿಂದೆ ಬರೆದ ಕಥೆಯ ವಿಷಯ ಈಗಲೂ ಬಹಳಷ್ಟು ಪ್ರಸ್ತುತವಾಗಿದೆ. ಕೋಮು ಗಲಭೆಗಳಂತಹ ಸಮಸ್ಯೆಗಳು ಈಗಲೂ ಅಂತ್ಯ ಕಾಣದ್ದು ಏಕೆ? ಎಂಬುದು ಚಿದಂಬರ ರಹಸ್ಯವಾಗಿಯೇ ಉಳಿದಿದೆ. ಇದರಲ್ಲಿ ಗಿರೀಶ ಕಾರ್ನಾಡರ ನಿರ್ದೇಶನದ ಗಟ್ಟಿತನ ಎದ್ದು ಕಾಣುತ್ತದೆ. ಪ್ರಕಾಶ ಬೆಳಕವಾಡಿ, ಪರಿಸರವಾದಿ ಸುರೇಶ ಹೆಬ್ಳೀಕರ, ಕಾಸರವಳ್ಳಿ ಮೊದಲಾದ ಹಿರಿಯ ಕಲಾವಿದರು ನಟಿಸಿರುವ ಈ ಚಿತ್ರ ಸಮಾಜದ ಸ್ವಾಸ್ಥ್ಯ ಕೆಡಿಸುವ ಜನರ ಬಗ್ಗೆ ಎಚ್ಚರಿಕೆಯ ಗಂಟೆ ಬಾರಿಸುತ್ತದೆ. ತೇಜಸ್ವಿ ಅವರ ನಿಸರ್ಗ ಪ್ರೀತಿ ಪ್ರತಿ ಹಂತದಲ್ಲೂ ಕಾಣಸಿಗುತ್ತದೆ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

**ವಾರದ ಪತ್ರ**

## ಉತ್ಸವ ಮೂರ್ತಿ ಊರಾಡಿದಷ್ಟೂ..

ಝೀ ವಾಹಿನಿಯಲ್ಲಿ ನಾಗಾಭರಣ ನಿರ್ದೇಶನದ 'ಬ್ರಹ್ಮ ಗಂಟು' ಆರಂಭದಲ್ಲಿ ತುಂಬಾ ಚೆನ್ನಾಗಿ ಮೂಡಿ ಬರುತ್ತಿತ್ತು. ಆದರೆ, ಈಗೀಗ ಕಥೆಯ ಎಳೆದಾಟ ಹೆಚ್ಚಾಯಿತೇನೋ ಎನಿಸುತ್ತಿದೆ. ಮಾತ್ರವಲ್ಲ, ಪಾತ್ರಗಳ ನಡುವೆ ಸಂಭಾಷಣೆ ನಡೆಯುತ್ತಿರುವಾಗಲೇ ಹಿನ್ನೆಲೆಯಲ್ಲಿ ಅಬ್ಬರದ ಸಂಗೀತ ಮೂಡಿ ಬರುತ್ತದೆ. ಈ ಸಂಗೀತದ ಅಬ್ಬರದಿಂದಾಗಿ ಸಂಭಾಷಣೆಯೇ ಕೇಳುವುದಿಲ್ಲ. ಸಂಭಾಷಣೆಯನ್ನು ಕೇಳಬೇಕೋ ಅಥವಾ ಸಂಗೀತವನ್ನು ಕೇಳಬೇಕೋ ಎಂಬುದನ್ನು ನಾವು ನಿರ್ಧರಿಸುವುದರೊಳಗಾಗಿ ಸಂಭಾಷಣೆ, ಸಂಗೀತ ಎರಡೂ ಮುಗಿದು ಹೋಗಿರುತ್ತವೆ!

'ಉತ್ಸವ ಮೂರ್ತಿ ಊರಾಡಿದಷ್ಟೂ ಮೂಲ ದೇವರ ಬೆಲೆ ಕಡಿಮೆಯಾಗುತ್ತದೆ' ಎಂಬ ನಾಣ್ಣುಡಿ ಇದೆ. ಹಾಗೆಯೇ, ಸಂಭಾಷಣೆ ನಡೆಯುತ್ತಿರುವಾಗಲೇ ಮೂಡಿಬರುವ ಅಬ್ಬರದ ಹಿನ್ನೆಲೆ ಸಂಗೀತದಿಂದಾಗಿ ಸಂಭಾಷಣೆ ತನ್ನ ಸ್ವಾರಸ್ಯವನ್ನು ಕಳೆದುಕೊಳ್ಳುತ್ತದೆ; ತನ್ಮೂಲಕ ಕಥೆಯೂ ತನ್ನ ಮೌಲ್ಯವನ್ನು ಕಳೆದುಕೊಂಡು, ಜನತೆಗೆ ಅಗ್ರಾಹ್ಯವಾಗುತ್ತದೆ. ಖ್ಯಾತ ನಿರ್ದೇಶಕರಾದ ಟಿ. ಎಸ್. ನಾಗಾಭರಣ ಅವರು ಈ ಕುರಿತು ಕ್ರಮ ಕೈಗೊಳ್ಳುತ್ತಾರೆ ಎಂದು ಆಶಿಸಬಹುದೆ?

–ಉಡುಪಿ ಅನಂತೇಶ ರಾವ್, ಬೆಂಗಳೂರು.

## ಗಂಭೀರತೆಗೆ ಧಕ್ಕೆ

ಕಲರ್ಸ್ ಕನ್ನಡ ವಾಹಿನಿಯ ಅಗ್ನಿಸಾಕ್ಷಿ ಧಾರಾವಾಹಿಯಲ್ಲಿ ಬಹಳ ಗಂಭೀರವಾದ ವಿಷಯಗಳಿವೆ.

★ ಸೊಸೆಯೇ ಅಲ್ಲದ ಚಂದ್ರಿಕಾ ಸೊಸೆಯಾಗಿದ್ದಾಳೆ.

★ ಸೊಸೆ ರಾಧಿಕ ಏನಾದಳು?

★ ಗೌತಮನ ಅಪಹರಣ ಮತ್ತು ಸಾವು.

★ ಅಂಜಲಿಯ ಕೊಲೆ ಪ್ರಯತ್ನ. ಏನೆಲ್ಲಾ ಗಂಭೀರವಾದ ವಿಷಯಗಳಿವೆ. ಎಲ್ಲವೂ ಗೊತ್ತಿರುವ ಸನ್ನಿಧಿ, ಅಂಜಲಿ ಮತ್ತು ಸಿದ್ದಾರ್ಥ್‌ಗೆ ಏನೂ ಹೇಳದಿರುವುದು ಖಂಡಿತ ಖೇದವೆನಿಸುತ್ತದೆ. ಮನೆಯೇ ಹೊತ್ತಿ ಉರಿಯುವಾಗ ಸನ್ನಿಧಿಯು **Dining Table** ಸಂಭಾಷಣೆಯಿಂದ ಹೊರ ಬರಲೇ ಇಲ್ಲಾ. ದಯವಿಟ್ಟು ನಿಮ್ಮ ದೊಂಬರಾಟವನ್ನು ಸಾಕು ಮಾಡಿ. ಒಳ್ಳೆಯ ಧಾರಾವಾಹಿಗಳಿಗೆ ಅವಕಾಶ ಮಾಡಿಕೊಡಿ.

—ಸುಮತಿ ಟಿ.ಎನ್., ತಿಪಟೂರು

## ಆದರ್ಶ ದಂಪತಿ

ಉದಯ ವಾಹಿನಿಯಲ್ಲಿ ಪ್ರತಿ ಭಾನುವಾರ 'ಆದರ್ಶ ದಂಪತಿಗಳು' ಬರುತ್ತಿದೆ. ಅದರಂತೆ ಚಂದನ ವಾಹಿನಿಯಲ್ಲಿ ಪ್ರತಿ ಸೋಮವಾರ ರಾತ್ರಿ ಏಳು ಮೂವತ್ತಕ್ಕೆ 'ಸಂಗಾತಿ ಸಂಪ್ರೀತಿ' ಬರುತ್ತಿದೆ. ಎರಡೂ ಆದರ್ಶ ದಂಪತಿಗಳಿಗೆ ಸಂಬಂಧಿಸಿದ್ದೆ. ಆದರೆ ಸಿಹಿ ಕಹಿ ದಂಪತಿಗಳು ನಡೆಸಿಕೊಡುತ್ತಿರುವ ಆದರ್ಶ ದಂಪತಿಗಳಿಗೂ ಸಂಗಾತಿ ಸಂಪ್ರೀತಿಗೂ ಅಜಗಜಾಂತರ ವ್ಯತ್ಯಾಸವಿದೆ.

—ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

## ಕೆಂಪೇಗೌಡರ ಸಮಾಧಿ ಅನಾಥ

ಇತ್ತೀಚೆಗೆ 'ಪ್ರಜಾ ಟಿವಿ'ಯಲ್ಲಿ ಪ್ರಸಾರವಾದ 'ಕೆಂಪೇಗೌಡ ಸಮಾಧಿ' ಕಾರ್ಯಕ್ರಮ ಐತಿಹಾಸಿಕ ಸ್ಥಳವಾಗಬೇಕಿದ್ದ ಬೆಂಗಳೂರು ನಿರ್ಮಾತೃ ಕೆಂಪೇಗೌಡರ ಸಮಾಧಿ ಅನಾಥವಾಗಿರುವ ಚಿತ್ರಣವನ್ನು ನೀಡಿತು. ಕೆಂಪೇಗೌಡರ ಹೆಸರಲ್ಲಿ ರಾಜಕೀಯ ಮಾಡುವ ಸರ್ಕಾರ, ರಾಜಕಾರಣಿಗಳಿಗೆ ಅವರ ಸಮಾಧಿ ಮಹತ್ವದ್ದಲ್ಲವೇ? ಎಂಬ ಪ್ರಶ್ನೆಯನ್ನಿಟ್ಟಿತು. ಸಮಾಧಿಯ ಕುರಿತಾದ ಗೊಂದಲಗಳನ್ನು ಬಗೆಹರಿಸುವಲ್ಲಿ ನಿರ್ಲಕ್ಷ್ಯ ವಹಿಸಿದ ಸರ್ಕಾರದ ತಪ್ಪನ್ನು ಬೆರಳು ಮಾಡಿ ತೋರಿಸಿತು. ಸರ್ಕಾರದ ಬೇಜವಾಬ್ದಾರಿಯನ್ನು, ಸಮಾಜದಲ್ಲಿನ ಅನ್ಯಾಯವನ್ನು ಬಯಲಿಗೆಳೆಯುವ ಇಂತಹ ಕಾರ್ಯಕ್ರಮಗಳು ಶ್ಲಾಘನೀಯ.

—ಅಮೃತಾ, ಕುಂದಾಪುರ

## ಕಣ್ಣೀರಿನ ಸರೆಗಮಪ

ಝೀ ಕನ್ನಡದ ಸ.ರೆ.ಗ.ಮ.ಪ.ದ ಕಾರ್ಯಕ್ರಮವೇನೋ ಚೆನ್ನಾಗಿ ಮೂಡಿಬಂತು. ಆದರೆ ಮಹಾ ಸಂಚಿಕೆಯಲ್ಲಿ ಎಲ್ಲರೂ ಚೆನ್ನಾಗಿ ಹಾಡಿದ್ದಾರೆ. ಪ್ರತಿಯೊಬ್ಬರನ್ನೂ ಹೊಗಳಿ ಅಟ್ಟಕ್ಕೇರಿಸಿದಿರಿ. ಪ್ರತಿಯೊಬ್ಬರಿಗೂ ತಾವೇ ಮುಂದು ಹೋಗುತ್ತೇವೆ ಅನ್ನಿಸಿತ್ತು. ಇಂತಹ ಸಮಯದಲ್ಲಿ ಇಬ್ಬರನ್ನು ಆರಿಸಿದಿರಿ. ಉಳಿದವರೆಲ್ಲಾ ಅಳುತ್ತ, ಕಣ್ಣೀರು ಹಾಕುತ್ತ ಹೋದರು. ಇದರ ಬದಲು ವಾರಕ್ಕೊಬ್ಬರಿಗೆ ಏನಾದರೂ ಸರ್ಟಿಫಿಕೇಟ್, ನಗದು ಕೊಟ್ಟು ಅವರನ್ನೂ ಖುಷಿಪಡಿಸಿದರೆ ಹೇಗೆ?

—ರುಕ್ಮಿಣಿ ಕೃ. ದೇಶಪಾಂಡೆ, ಗೋಕಾಕ